ಪುಲಮೇಶ್ವರದಿನ್ನಿ ಗ್ರಾಮ ಸ್ಥಳಾಂತರಿಸಲು ಇನ್‌ಫೋಸಿಸ್ ವತಿಯಿಂದ ಶೀಘ್ರವಾಗಿ ಮನೆಗಳ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.

ಇ 364 ಮನೆಗಳಿಗೆ ಬೇಸ್‌ಮೆಂಟ್ ಮುಗಿದಿರುತ್ತದೆ. 62 ಮನೆಗಳಿಗೆ ಗೋಡೆ ಕೆಲಸ ನಡೆದಿದೆ.

ಈ ಹೆಚ್ಚುವರಿಯಾಗಿ ದೇವರಗುಡಿ, ಸಿಂಗಾಪೂರು, ಮುಕುಂದ ಮತ್ತು ಉಪ್ಪಳ ಗ್ರಾಮಗಳನ್ನು ಸ್ಥಳಾಂತರಿಸುವ ಬಗ್ಗೆ ಸಾರ್ವಜನಿಕರಿಂದ ಬೇಡಿಕೆ ಇರುತ್ತದೆ. ಈ ಬಗ್ಗೆ ಸ್ಥಳ ತನಿಖೆ ನಡೆಸಲಾಗುತ್ತಿದೆ.

ಉ ದಾನಿಗಳು ಮನೆ ಕಟ್ಟಿಸಿ ಕೊಡುವ ಕೆಲಸಿದಂದ ಹಿಂತೆಗೆದಿದ್ದರಿಂದ, ಸ್ವಲ್ಪ ವಿಳಂಬವಾಗಿದೆ.

ಊ ಪ್ರತಿ ಮನೆಗೆ ರೂ. 1.35 ಲಕ್ಷ ನಿಗದಿ ಮಾಡಲಾಗಿದೆ.

ತುಂಗಭದ್ರ ನದಿಗೆ ಬ್ಯಾರೇಜ್

718(1018) ಶ್ರೀ ನಾಡಗೌಡ ವೆಂಕಟರಾವ್:(ಸಿಂಧನೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ತುಂಗಭದ್ರ ನದಿಗೆ ಬ್ಯಾರೇಜ್‌ಗಳ ನಿರ್ಮಾಣಕ್ಕಾಗಿ ಸರ್ಕಾರ ಗುರುತಿಸಿರುವ ಸ್ಥಳಗಳು ಯಾವುವು; (ವಿವರಗಳನ್ನು ನೀಡುವುದು)

ಆ ತುಂಗಭದ್ರ ನದಿಯ ಬ್ಯಾರೇಜ್‌ಗಳ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ; ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಯಿತು ಮತ್ತು ಈಗ ಕಾಮಗಾರಿಯು ಯಾವ ಹಂತದಲ್ಲಿದೆ;

ಇ ಹಾಗಿಲ್ಲದಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು;

ಈ ಈ ಬ್ಯಾರೇಜ್‌ಗಳ ನಿರ್ಮಾಣಕ್ಕಾಗಿ ಸರ್ಕಾರ ಈವರೆವಿಗೂ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಉ ಈ ಬ್ಯಾರೇಜ್‌ಗಳನ್ನು ನಿರ್ಮಿಸಲು ಮುಂದೆ ಬಂದಿರುವ ಗುತ್ತಿಗೆದಾರರು ಯಾರು; (ಹೆಸರು, ವಿಳಾಸ ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು)

ಅ ತುಂಗಭದ್ರಾ ನದಿಗೆ ಅಡ್ಡಲಾಗಿ 4 ಸಮತೋಲನಾ ಜಲಾಶಯಗಳನ್ನು (ಬ್ಯಾರೇಜ್) ನಿರ್ಮಿಸಲು ಉದ್ದೇಶಿಸಲಾಗಿದೆ. ಅವುಗಳ ವಿವರಗಳು ಈ ಕೆಳಗಿನಂತಿರುತ್ತವೆ.

ಕ್ರ.ಸಂ	ಕಾಮಗಾರಿಯ ಹೆರು
1	ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಚಿಕಲಪರ್ವಿ ಗ್ರಾಮದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಸಮತೋಲನಾ ಜಲಾಶಯ
2	ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹೆಡನಿಗಾಳ ಗ್ರಾಮದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಸಮತೋಲನಾ ಜಲಾಶಯ
3	ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕಿನ ಗಡ್ಡಿಮಡಿ ಗ್ರಾಮದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಸಮತೋಲನಾ ಜಲಾಶಯ
4	ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಬೆನ್ನೂರು ಗ್ರಾಮದ ಹತ್ತಿರ ನಿರ್ಮಿಸಲು ಉದ್ದೇಶಿಸಿರುವ ಸಮತೋಲನಾ ಜಲಾಶಯ

ಆ ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ.

ಇ ಸದರಿ ನಾಲ್ಕು ಸಮತೋಲನಾ ಜಲಾಶಯಗಳ ಡಿ.ಪಿ.ಆರ್.ಗಳನ್ನು ಅಂದಾಜುಗಳೊಂದಿಗೆ ತಾಂತ್ರಿಕ ಸಲಹಾ ಸಮಿತಿಯ ಮುಂದೆ ಮಂಡಿಸಲಾಗಿದ್ದು ಈ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ 2010–11ನೇ ಸಾಲಿನಲ್ಲಿ ಸಮತೋಲನಾ ಜಲಾಶಯಗಳು, ಪಿಕಪ್ ಗಳ ಅಡಿಯಲ್ಲಿ 10.00 ಲಕ್ಷ ರೂ.ಗಳ ಸಾಂಕೇತಿಕ ಅನುದಾನ ನೀಡಲಾಗಿದೆ.

ಉ ಈ ಪ್ರಶ್ನೆ ಉದ್ಭವಿಸುವುದಿಲ್ಲ.